**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.884/2014**

**ಪಿ.ಡಬ್ಲ್ಯೂಃ 20**

**ಸಿ.ಡಬ್ಲ್ಯೂಃ 21**

| | | |
|---|---|---|
| **ಸಾಕ್ಷಿದಾರರ ಹೆಸರು** | ಃ | ವೆಂಕಟೇಶ |
| **ತಂದೆಯ ಹೆಸರು** | ಃ | ಸುಂದರೇಶ |
| **ವಯುಸ್ಸು** | ಃ | **40 ವರ್ಷ** |
| **ಉದ್ಯೋಗ** | ಃ | ವ್ಯವಹಾರ |
| **ವಾಸಸ್ಥಳ** | ಃ | ಬಾವಿಕೆರೆ |

**ದಿನಾಂಕಃ 09-11-2020 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಪಿಃ ಡಬ್ಲ್ಯು **20** ರವರು ನ್ಯಾಯಾಲಯದ ಮುಂದೆ ವಿ ಸಿ ಮೂಲಕ ಹಾಜರಾಗಿರುತ್ತಾರೆ

**ಮುಖ್ಯ ವಿಚಾರಣೆ ಃ ಸ.ಸ.ಅ. ರವರಿಂದ.**

ದಿಃ **03-10-2013** ರಂದು ನನಗೆ ಪೋಲೀಸರು ನೋಟೀಸು ನೀಡಿದ್ದು, ನಾನು ಬಾವಿಕೆರೆಯ ಕಾವೇರಿ ಗ್ರಾಮೀಣ ಬ್ಯಾಂಕಿಗೆ ಹೋಗಿದ್ದೆ. ನನ್ನ ಸಮಕ್ಷಮ ಪೋಲೀಸರು ಚಿನ್ನ ಬೆಳ್ಳಿ ವ್ಯಾಪಾರಿಯಾದ ಚಾಸಾ**20** ರವರಿಗೆ ಆಭರಣಗಳನ್ನು ಪರೀಕ್ಷಿಸಿ ಹೇಳಿ ತಿಳಿಸಿದರು. ಚಾಸಾ-**20** ರವರು ಬ್ಯಾಂಕಿನಲ್ಲಿದ್ದ ಆಭರಣಗಳನ್ನು ಪರೀಕ್ಷಿಸಿ ವರದಿ ನೀಡಿರುತ್ತಾರೆ. ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ನಿಪಿ-**9** ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ-**9(ಜೆ)** ಎಂದು ಗುರುತಿಸಲಾಯ್ತು. ಸಾಕ್ಷಿಯು ನಿಪಿ-**10, 11** ರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಃ ಆರೋಪಿ ಪರ** ಶ್ರೀ ಎಂ ಕೆ ಟಿ **ವಕೀಲರಿಂದ.**

ಮಹಜರಿನಲ್ಲಿ ಬರೆದ ವಿಚಾರವನ್ನು ಓದಿ ತಿಳಿದಿದ್ದು, ಅದರಲ್ಲಿ ಚಾಸಾ-**18, 20, 22** ಹಾಗೂ ನಾನು ಸಹಿ ಮಾಡಿರುತ್ತೇವೆ. ಮಹಜರನ್ನು ಬೆಃ **11** ಗಂಟೆ ಸುಮಾರಿಗೆ ಬರೆದಿರುತ್ತಾರೆ. ಮಹಜರ್ ಕಾಲಕ್ಕೆ ಸುಮಾರು **7, 8** ಜನ ಇದ್ದೆವು. ಮಹಜರ್ ಸಮಯದಲ್ಲಿ ಒಟ್ಟು **9** ಚೀಲಗಳಲ್ಲಿ ಆಭರಣಗಳು ಇದ್ದು , ಅವು ಯಾರ್ಯಾರಿಗೆ ಎಷ್ಟು ಎಷ್ಟು ಸೇರಿತ್ತು ಎಂದು ನನಗೆ ಹೇಳಲಾಗುವುದಿಲ್ಲ. ಸುಮಾರು **8-10** ಲಕ್ಷ ಮೌಲ್ಯದ ಚಿನ್ನಾಭರಣಗಳು ಇದ್ದವು. ಮಹಜರ್ ಕಾಲದಲ್ಲಿ ದಾಖಲೆಗಳನ್ನು ಹಾಗೂ ಇತರೇ ವಸ್ತುಗಳನ್ನು ವಶಪಡಿಸಿಕೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಮಹಜರ್ ಮಾಡಿದ ಸ್ಥಳದ ಪೂರ್ವಕ್ಕೆ ಬಾಗಿಲು, ಪಶ್ಚಿಮಕ್ಕೆ ಖಾಲಿ ಸೈಟು, ಉತ್ತರಕ್ಕೆ ರಮೇಶ್ ರವರ ಮನೆ, ದಕ್ಷಿಣಕ್ಕೆ ಸುರೇಶ್ ರವರ ಕಾಂಪ್ಲೆಕ್ಸ್ ಇರುತ್ತದೆ. **9** ಚೀಲಗಳಿದ್ದ ಆಭರಣಗಳು ಯಾರಿಗೆ ಸಂಬಂದಿಸಿದ್ದವೆಂಬ ಬಗ್ಗೆ ನನಗೆ ಗೊತ್ತಿಲ್ಲ. ಯಾವ ಯಾವ ಚೀಲಗಳಲ್ಲಿ ಯಾವ ಮಾದರಿಯ ಆಭರಣಗಳು ಇದ್ದವೆಂದು ಹೇಳಲಾಗುವುದಿಲ್ಲ. ಮಹಜರ್ ಸುಮಾರು **10-12** ಪುಟಗಳಲ್ಲಿ ಬರೆದಿದ್ದವು. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

ಓ. ಕೇ. ಸ. ಇ. ಎ. ಒ.

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**